

ಉದ್ದದ ಕೋಲಿನಿಂದ ನೆಲ್ಲಿಕಾಯಿಗಳನ್ನು ಉದುರಿಸಿ ಹೆಕ್ಕಿಕೊಂಡ. ಎರಡೂ ಕಿಸೆಗಳಲ್ಲಿ ತುಂಬಿದರೂ ಇನ್ನೂ ಇವೆ! ನಾಳೆ ಮತ್ತೆ ಬರಬೇಕು, ಬರುವಾಗ ಕೊಕ್ಕೆ ಮತ್ತು ದೊಡ್ಡ ಚೀಲ ಹಿಡಿದುಕೊಂಡು ಬರಬೇಕು ಅಂದುಕೊಂಡ.

ಒಂದು ಕಡೆ ಬುಗುರಿಯ ಗಿಡ! ಗಿಡದ ತುಂಬ ಬುಗುರಿಗಳು! ಓ! ಶಾಲೆಯ ಹುಡುಗರು ಕೆಲವರು ಬುಗುರಿಗಳನ್ನು ತರುವುದು ಇಂಥ ಗಿಡಗಳಿಂದಲೇ ಏನು? ನಾನೂ ಈಗ ಶಾಲೆಗೆ ಬುಗುರಿ ತೆಗೆದುಕೊಂಡು ಹೋಗಬಹುದು! ಜೊತೆಗೆ ಗೆಳೆಯರು ಯಾರಾದರೂ ಇರಬೇಕಿತ್ತು. ಇಲ್ಲಿ ಬಂದರೆ ಹೊತ್ತು ಹೋದದ್ದೇ ಗೊತ್ತಾಗುವುದಿಲ್ಲ ಅಂದುಕೊಂಡ ನಿಹಾಲ್.

ಮರದಿಂದ ಮರಕ್ಕೆ ಬಿಳಲುಗಳು ಹಾವುಗಳಂತೆ ಬಂಧಿಸಲ್ಪಟ್ಟು ಉಯ್ಯಾಲೆ ಸೃಷ್ಟಿಯಾಗಿರುವುದನ್ನು ನೋಡಿ ಅವನಿಗಾದ ಸಂಭ್ರಮ ಸಣ್ಣದಲ್ಲ. ಜೊತೆಗೆ ಯಾರಾದರೂ ಇದ್ದರೆ ಎಷ್ಟು ಚೆನ್ನಾಗಿ ಆಟವಾಡಬಹುದು! ಆಹಾ! ಇಲ್ಲಿ ನಿಂತು ನೋಡಿದರೆ ಜಗತ್ತೇ ಕಾಣುತ್ತೇನೋ! ಎಲ್ಲಿಂದ ಎಲ್ಲಿ ತನಕ ಎಷ್ಟು ದೂರದ ತನಕ ಕಾಣುತ್ತಿದೆ! ಅವುಗಳ ಮಧ್ಯೆ ತನ್ನ ಮನೆ ಎಲ್ಲಿರಬಹುದು ಎಂದು ಹುಡುಕಿ ನೋಡಿ ಗೊತ್ತಾಗದೆ ಅವನು ತನ್ನ ಪ್ರಯತ್ನ ಬಿಟ್ಟುಬಿಟ್ಟ. ಎರಡು ಬಿಳಿ ಮೊಲಗಳು ಟುಣಕ್ಕನೆ ಹಾರಿ ಬಂದು ಎಲ್ಲಿ ಹೋದವು? ನಿಹಾಲ ಒಂದು ಎತ್ತರದ ಕಲ್ಲಿನ ಮೇಲೆ ನಿಂತು ಅವು ಹೋದ ದಿಕ್ಕನ್ನು ಅನುಸರಿಸಿ ಕಣ್ಣು ಹಾಯಿಸಿದ. ಓ! ಅಲ್ಲಿ ಒಂದು ಕಡೆ ನೀರು ಸಣ್ಣದಾಗಿ ಹರಿದು ಬರುತ್ತಿದೆ! ಮೊಲಗಳು ಆ ನೀರನ್ನು ಕುಡಿಯುತ್ತಿವೆ! ಅಲ್ಲಿ ನೀರಿದೆ ಎಂದು ಅವುಗಳಿಗೆ ಹೇಗೆ ಗೊತ್ತಾಯಿತೋ? ನಿಹಾಲ ನೋಡುತ್ತಲೇ ಇದ್ದ. ಅವನ ಮುಖದಲ್ಲಿ ನಗು ಅರಳಿತ್ತು.

ಇಲ್ಲಿ ಇನ್ನೂ ಏನೇನಿದೆಯೋ? ಹತ್ತಿರ ಮರದ ಮೇಲಿನ ಗೆಲ್ಲುಗಳು ಗಲಗಲ ಅಲುಗಾಡುತ್ತಿವೆ ಯಾಕೆ? ನಿಹಾಲನಿಗೆ ಭಯವೂ ಆಯಿತು. ಮರ